# ಕರ್ನಾಟಕ ಲೋಕಾಯುಕ್ತ

ನಂ. ಕಂಪ್ಲೆಂಟ್/ಉಪಲೋಕ್/ಎಂವೈಎಸ್/2179/2021
ಮಂಡನಾಧಿಕಾರಿಗಳ ಶಾಖೆ, ಎಆರ್ಇ-18

ಬಹುಮಹಡಿಗಳ ಕಟ್ಟಡ,
ಡಾ: ಅಂಬೇಡ್ಕರ್ ವೀದಿ, ಬೆಂಗಳೂರು,
ದಿನಾಂಕ: 10/12/2021

## ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ರ ಕಲಂ 12 (3) ರನ್ವಯ ಶಿಫಾರಸ್ಸು ವರದಿ

ವಿಷಯ: 1) ಶ್ರೀ ಪಿ. ಶಿವಪ್ರಸಾದ ಬಿನ್ ಲೇಟ್ ಪುಟ್ಟರಾಜು ಟಿ. ಪೌರಾಯುಕ್ತರು, ನಗರಸಭೆ, ಚಿಕ್ಕಮಗಳೂರು ಜಿಲ್ಲೆ (2) ಶ್ರೀ ಹರೀಶ ಎ. ಬಿನ್ ಲೇಟ್ ಕೆಂಚಪ್ಪ, ಡಿ. ಗ್ರುಪ್ ಎಂಪ್ಲಾಯಿ, (ಅಟೆಂಡರ್) ನಗರಸಭೆ, ಚಿಕ್ಕಮಗಳೂರು ಜಿಲ್ಲೆ ಇವರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ದುರ್ನಡತೆ ಎಸಗಿರುವ ಬಗ್ಗೆ ಇವರ ವಿರುದ್ಧದ ನಡವಳಿ ಕುರಿತು.

1) ಚಿಕ್ಕಮಂಗಳೂರು ಜಿಲ್ಲೆ, ಭ್ರಷ್ಟಾಚಾರ ನಿಗ್ರಹ ದಳ ಪೊಲೀಸ್ ಠಾಣೆಯ ಆರಕ್ಷಕ ನಿರೀಕ್ಷಕರು (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ) ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳೊಂದಿಗೆ ಸಲ್ಲಿಸಿದ ವರದಿಯಲ್ಲಿ 1) ಶ್ರೀ ಪಿ. ಶಿವಪ್ರಸಾದ ಬಿನ್ ಲೇಟ್ ಪುಟ್ಟರಾಜು ಟಿ. ಪೌರಾಯುಕ್ತರು, ನಗರಸಭೆ, ಚಿಕ್ಕಮಗಳೂರು ಜಿಲ್ಲೆ (2) ಶ್ರೀ ಹರೀಶ ಎ. ಬಿನ್ ಲೇಟ್ ಕೆಂಚಪ್ಪ, ಡಿ. ಗ್ರುಪ್ ಎಂಪ್ಲಾಯಿ, (ಅಟೆಂಡರ್) ನಗರಸಭೆ, ಚಿಕ್ಕಮಗಳೂರು ಜಿಲ್ಲೆ (ಇನ್ನು ಮುಂದೆ 1 ಮತ್ತು 2ನೇ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಸರ್ಕಾರಿ/ಸಾರ್ವಜನಿಕ ನೌಕರರಾಗಿದ್ದು, ಶ್ರೀ ಕೋದಂಡರಾಮಶೆಟ್ಟಿ ಬಿನ್ ಲೇಟ್ ಗಂಗಶೆಟ್ಟಿ, ನಿವೃತ್ತ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಉದ್ಯೋಗಿ, ವಿಜಯಪುರ 7ನೇ ಕ್ರಾಸ್, ಚಿಕ್ಕಮಂಗಳೂರು ಜಿಲ್ಲೆ. (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ)

ಇವರು 1 ಮತ್ತು 2ನೇ ಎದುರುದಾರರನ್ನು ಭೇಟಿ ಮಾಡಿದಾಗ ದೂರುದಾರರ ಕೆಲಸ ಮಾಡಿಕೊಡಲು ಲಂಚದ ಹಣಕ್ಕೆ ಬೇಡಿಕೆ ಇಟ್ಟು ದುರ್ನಡತೆ ತೋರಿಸಿರುತ್ತಾರೆ ಎಂದು ವರದಿ ಸಲ್ಲಿಸಿದ ಮೇರೆಗೆ, ದಾಖಲೆಗಳನ್ನು ಪರಿಶೀಲಿಸಿದಾಗ, 1 ಮತ್ತು 2ನೇ ಎದುರುದಾರರು ದುರ್ನಡತೆ ತೋರಿಸಿರುವುದು ಮೇಲ್ನೋಟಕ್ಕೆ ಕಂಡುಬಂದಿದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 7 (2) ರನ್ವಯ ಸ್ವಯಂ ಪ್ರೇರಿತ ತನಿಖೆಯನ್ನು ಕೈಗೊಂಡಿರುತ್ತಾರೆ.

2) <u>ಪ್ರಕರಣದ ಸಂಕ್ಷಿಪ್ತ ಸಾರಾಂಶ:-</u>ದೂರುದಾರರು 2011 ನೇ ಇಸವಿಯಲ್ಲಿ ಕಾಳಿದಾಸ ನಗರದ ಶನೇಶ್ವರ ದೇವಸ್ಥಾನದ ಹಿಂಭಾಗದಲ್ಲಿರುವ ನಾಗರಾಜ ಬಿನ್ ದೊಡ್ಡಯ್ಯರವರು ಕಟ್ಟಿದ ಮನೆಯನ್ನು ಖರೀದಿಸಿರುತ್ತಾರೆ. 2016ನೇ ಸಾಲಿನಲ್ಲಿ ಅವರ ಮಗಳ ಮದುವೆ ನಿಶ್ಚಯವಾಗಿದ್ದರಿಂದ ಮತ್ತು ಮದುವೆ ಖರ್ಚಿಗೆ ಹಣದ ಅವಶ್ಯಕತೆ ಇದ್ದ ಕಾರಣ ತಮ್ಮ ಮನೆಯನ್ನು ಅವರ ಪರಿಚಯದವರಾದ ಮಂಜುರವರ ಮೂಲಕ ಚಿಕ್ಕಮಗಳೂರು ನಗರದ ನಿಂಗೇಗೌಡರವರಿಗೆ ಮಾರಾಟ ಮಾಡಲು ಜನವರಿ 2016 ರಲ್ಲಿ ಕರಾರು ಮಾಡಿಕೊಂಡು ಮುಂಗಡ ಹಣವನ್ನು ಪಡೆದುಕೊಂಡಿರುತ್ತಾರೆ. ದೂರುದಾರರು ಖರೀದಿಸಿದ ಮನೆಯ ಖಾತೆಯನ್ನು ನಾಗರಾಜರವರ ಹೆಸರಿನಿಂದ ತಮ್ಮ ಹೆಸರಿಗೆ ಬದಲಾವಣೆ ಮಾಡಿಸಿಕೊಳ್ಳಬೇಕಾಗಿದ್ದರಿಂದ ಫೆಬ್ರುವರಿ 2016 ರಲ್ಲಿ ನಗರಸಭೆ ಚಿಕ್ಕಮಗಳೂರಿಗೆ ಖಾತಾ ಬದಲಾವಣೆ ಮಾಡಿಕೊಡಲು ದೂರುದಾರರು ಅರ್ಜಿಯನ್ನು ಸಲ್ಲಿಸಿರುತ್ತಾರೆ. ದೂರುದಾರರು ಸಲ್ಲಿಸಿದ ಅರ್ಜಿಯು ನಗರಸಭೆ ಕೇಸ್ ವರ್ಕರ್ ಆದ ಕೃಷ್ಣರವರ ಬಳಿ ಬಂದಿದ್ದು ಅವರು ದೂರುದಾರರಿಗೆ ಇವತ್ತು ಬಾ, ನಾಳೆ ಬಾ ಎಂದು ಸತಾಯಿಸುತ್ತ ದೂರುದಾರರಿಗೆ ಒಂದು ಸಲ ಡೆವಲಪ್‌ಮೆಂಟ್ ಚಾರ್ಜ್ ಕಟ್ಟಿದ ಬಗ್ಗೆ ರಸೀದಿ ನೀಡಿ, ಮತ್ತೊಂದು ಸಲ ನಕಾಶೆ ತಂದುಕೊಡಿ ಎಂದು ಹೇಳಿ

ಅಲೆದಾಡುವಂತೆ ಮಾಡಿರುತ್ತಾರೆ. ದೂರುದಾರರ ಮನೆ ಖರೀದಿ ಮಾಡಲು ದೂರುದಾರರಿಗೆ ಮುಂಗಡ ಹಣ ನೀಡಿದ್ದ ನಿಂಗೇಗೌಡ ಇವರು ಖಾತಾ ಮಾಡಿಕೊಟ್ಟು ರಿಜಿಸ್ಟ್ರೇಶನ್ ಮಾಡಿಕೊಡಿ ಎಂದು ಅರ್ಜೆಂಟ್ ಮಾಡುತ್ತಿದ್ದು ಆಗಲಿಲ್ಲವೆಂದರೆ ಅಡ್ವಾನ್ಸ್ ಹಣ ವಾಪಸ್ ಕೊಡಿ ಎಂದು ಕೇಳುತ್ತಿದ್ದರಿಂದ ದೂರುದಾರರು ಡಿಸೆಂಬರ್ ಮೊದಲನೇ ವಾರದಲ್ಲಿ ನಿಂಗೇಗೌಡ ಹಾಗೂ ಮಂಜುರವನ್ನು ಕರೆದುಕೊಂಡು 1ನೇ ಎದುರುದಾರರ ಬಳಿ ಹೋಗಿ ತಮ್ಮ ತೊಂದರೆಯನ್ನು ತಿಳಿಸಿದಾಗ 1ನೇ ಎದುರುದಾರರು ದೂರುದಾರರಿಗೆ "ನಾನು ನಿಮ್ಮ ಮನೆಯನ್ನು ಖುದ್ದು ನೋಡಿ ಪರಿಶೀಲನೆ ಮಾಡುತ್ತೇನೆ" ಎಂದು ಹೇಳಿ ದಿ: 24/12/2016 ರಂದು ಬಂದು ನೋಡಿ ಬುದವಾರ ದಿನಾಂಕ 28/12/2016 ರಂದು ಕಛೇರಿಗೆ ಬರುವಂತೆ ತಿಳಿಸಿರುತ್ತಾರೆ. ಅದರಂತೆ ದೂರುದಾರರು, ನಿಂಗೇಗೌಡ ಹಾಗೂ ಮಂಜುರವರ ಜೊತೆ ದಿನಾಂಕ 28/12/2016 ರಂದು 1ನೇ ಎದುರುದಾರರನ್ನು ಭೇಟಿಯಾದಾಗ ದೂರುದಾರರಿಗೆ "ಅಭಿವೃದ್ಧಿ ಶುಲ್ಕ 60,000/- ರೂ. ಕಟ್ಟಬೇಕು, ನಾನು ನಗರದ ಎಇಇ ರವರನ್ನು ಕೇಳಿದ್ದೆ, ಅವರೇ ಹೇಳಿದ್ದಾರೆ. ಅದಕ್ಕೆ ನೀವು ಅದರಲ್ಲಿ ಅರ್ಧ ಭಾಗ ಹಣವನ್ನು ಲಂಚದ ರೂಪದಲ್ಲಿ ನಮಗೆ ಕೊಡಿ" ಎಂದು ಕೇಳಿರುತ್ತಾರೆ. ಆಗ ದೂರುದಾರರು ಅದರಲ್ಲಿ ಸ್ವಲ್ಪ ಕಡಿಮೆ ಮಾಡಿಕೊಳ್ಳಿ ಎಂದು ಕೇಳಿದಾಗ 1ನೇ ಎದುರುದಾರರು ಬಹಳ ಹೊತ್ತಿನ ನಂತರ 20,000/- ರೂ.ಗೆ ಒಪ್ಪಿಕೊಂಡಿರುತ್ತಾರೆ. ದೂರುದಾರರು 1ನೇ ಎದುರುದಾರರೊಂದಿಗೆ ನಡೆಸಿದ ಸಂಭಾಷಣೆಯನ್ನು ಅವರು ತಮ್ಮ ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿಕೊಂಡಿರುತ್ತಾರೆ. ದೂರುದಾರರ ಬಳಿ ಆ ಸಂದರ್ಭದಲ್ಲಿ ಅಷ್ಟು ಹಣ ಇಲ್ಲದ ಕಾರಣ ಅವರು ನಿಂಗೇಗೌಡ ಮತ್ತು ಮಂಜುರವರೊಂದಿಗೆ ಹೊರಗೆ ಬಂದು ನಿಂಗೇಗೌಡರ ಬಳಿ 20,000/- ರೂ. ಹಣ ಪಡೆದುಕೊಂಡು ದೂರುದಾರರಿಗೆ ತುರ್ತು ಅಗತ್ಯವಿದ್ದ ಕಾರಣ 4,000/- ರೂ. ಹಣವನ್ನು ಅದರಲ್ಲಿಂದ ಇಟ್ಟುಕೊಂಡು ಉಳಿದ 16,000/- ರೂ.ಗಳೊಂದಿಗೆ ದೂರುದಾರರು ಮತ್ತು ಮಂಜು ನಗರಸಭೆಗೆ ಬಂದು 1ನೇ ಎದುರುದಾರರಿಗೆ ಕೊಟ್ಟಿರುತ್ತಾರೆ. ಆಗ

1ನೇ ಎದುರುದಾರರು ಉಳಿದ 4,000/- ರೂ. ಲಂಚದ ಹಣವನ್ನು ಕೇಳಿದ್ದು ಆಗ ದೂರುದಾರರು ತಮ್ಮ ಬಳಿ ಈಗ ಇಲ್ಲ ಎಂದು ತಿಳಿಸಿದಾಗ 1ನೇ ಎದುರುದಾರರು ದೂರುದಾರರಿಗೆ "ಖಾತೆ ರೆಡಿ ಮಾಡಿ ಇಟ್ಟಿರುತ್ತೇನೆ ನಾಳೆ 4,000/- ರೂ. ಲಂಚದ ಹಣ ತೆಗೆದುಕೊಂಡು ಸಾಯಂಕಾಲ 4-00 ಘಂಟೆಗೆ ಕಛೇರಿಗೆ ಬಂದು ನೀಡು" ಎಂದು ತಿಳಿಸಿರುತ್ತಾರೆ.

3. ದೂರುದಾರರಿಗೆ ಲಂಚದ ಹಣ ಕೊಡಲು ಇಷ್ಟವಿಲ್ಲದೇ ಇದ್ದುದರಿಂದ, ದಿನಾಂಕ 29/12/2016 ರಂದು ಬೆಳಿಗ್ಗೆ 11-30 ಘಂಟೆಗೆ ಭ್ರಷ್ಟಾಚಾರ ನಿಗ್ರಹ ದಳ ಚಿಕ್ಕಮಗಳೂರು ಪೊಲೀಸ್ ಠಾಣೆಗೆ ಹಾಜರಾಗಿ ತನಿಖಾಧಿಕಾರಿಯ ಮುಂದೆ ದೂರು ನೀಡಿದಾಗ ಸದರಿ ಪೊಲೀಸ್ ಠಾಣೆಯಲ್ಲಿ ಮೊ. ಸಂ. 06/2016 ಪಿ.ಸಿ. ಕಾಯಿದೆ 1988 ರ ಕಲಂ 7, 13 (1)(ಡಿ) ಸಹಿತ 13 (2) ರಡಿ 1 ಮತ್ತು 2ನೇ ಎದುರುದಾರರ ವಿರುದ್ಧ ಪ್ರಥಮ ವರ್ತಮಾನ ವರದಿ ದಾಖಲಾಗಿರುತ್ತದೆ.

4. ನಂತರ ತನಿಖಾಧಿಕಾರಿಗಳು ಸರ್ಕಾರಿ ಪಂಚರುಗಳಾದ ಶ್ರೀ ಬಿ. ರಮೇಶ್ ಬಿನ್ ಭೀಮಯ್ಯ ಮತ್ತು ಶ್ರೀ ಟಿ.ಕೆ. ಶಿವಕುಮಾರ್ ಬಿನ್ ಲೇಟ್ ಕಾಳಿಂಗ ಇವರನ್ನು ಬರಮಾಡಿಕೊಂಡಿದ್ದು, ಅವರುಗಳ ಪರಿಚಯ ಮಾಡಿಕೊಂಡು ಹಾಗೂ ದೂರುದಾರರಿಗೆ ಪರಿಚಯಿಸಿ ಪ್ರಥಮ ವರ್ತಮಾನ ವರದಿಯ ನಕಲಿನ ಪ್ರತಿಯನ್ನು ಓದಿಕೊಳ್ಳಲು ನೀಡಿರುತ್ತಾರೆ. ಎದುರುದಾರರು ಲಂಚಕ್ಕಾಗಿ ಬೇಡಿಕೆ ಇಟ್ಟಿರುವುದು ಕಂಡುಬರುತ್ತದೆ. ನಂತರ ದೂರುದಾರರು ದಿ: 28/12/2016 ರಂದು ಎದುರುದಾರರೊಂದಿಗೆ ನಡೆಸಿದ ಸಂಭಾಷಣೆಯನ್ನು ತಮ್ಮ ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿಕೊಂಡಿರುವುದಾಗಿ ತಿಳಿಸಿ ತಮ್ಮ ಫೋನ್‌ನ್ನು ತನಿಖಾಧಿಕಾರಿಯವರ ಮುಂದೆ ಹಾಜರುಪಡಿಸಿದಾಗ ತನಿಖಾಧಿಕಾರಿಗಳು ಕಛೇರಿಯ ಕಂಪ್ಯೂಟರ್ ಮೂಲಕ ಪಂಚರಿಗೆ ಕೇಳಿಸಿ ಸದರಿ ಸಂಭಾಷಣೆಯನ್ನು ಒಂದು ಸಿ.ಡಿ.ಗೆ ಧ್ವನಿ ಮುದ್ರಿಸಿಕೊಂಡಿರುತ್ತಾರೆ. ನಂತರ ತನಿಖಾಧಿಕಾರಿಗಳು ದೂರುದಾರರಿಗೆ

ಎದುರುದಾರರು ಕೇಳಿದರೆ ಕೊಡಲೆಂದು ತಂದಿರುವ ಲಂಚದ ಹಣವನ್ನು ಹಾಜರುಪಡಿಸುವಂತೆ ಸೂಚಿಸಿದಾಗ ದೂರುದಾರರು ಲಂಚ ನೀಡಲು ತಂದ (ರೂ. 2000/- ಮುಖ ಬೆಲೆಯ 2 ನೋಟುಗಳು) ಒಟ್ಟು 4,000/- ರೂ.ಗಳನ್ನು ಹಾಜರುಪಡಿಸಿದಾಗ ತನಿಖಾಧಿಕಾರಿಗಳು ಸದರಿ ಹಣವನ್ನು ಪಂಚರಿಗೆ ನೀಡಿ ನೋಟುಗಳ ನಂಬರ್ ಹಾಗೂ ಮೌಲ್ಯಗಳನ್ನು ಪರಿಶೀಲಿಸಲು ತಿಳಿಸಿರುತ್ತಾರೆ. ಅದರಂತೆ ಪಂಚರು ಪರಿಶೀಲನೆ ಮಾಡಿ ಒಂದು ಬಿಳಿ ಹಾಳೆಯಲ್ಲಿ ನೋಟುಗಳ ನಂಬರನ್ನು ಪಂಚ 2 ರವರು ಬರೆದುಕೊಂಡಿರುತ್ತಾರೆ. ತನಿಖಾಧಿಕಾರಿಗಳ ಸೂಚನೆಯಂತೆ ಸಿಬ್ಬಂಧಿ ಸದರಿ ನೋಟುಗಳಿಗೆ ಪಿನಾಪ್ತಲಿನ್ ಪೌಡರನ್ನು ಸವರಿದ್ದು, ಪಂಚ ಸಾಕ್ಷಿ-1 ರವರಿಂದ ದೂರುದಾರರ ಅಂಗ ಶೋಧನೆ ಮಾಡಿದ್ದು ದೂರುದಾರರು ತಿಳಿ ನೇರಳೆ ಬಣ್ಣದ ತುಂಬು ತೋಳಿನ ಶರ್ಟ್ ಹಾಗೂ ಕಂದು ಬಣ್ಣದ ಪ್ಯಾಂಟ್ ಧರಿಸಿದ್ದು ದೂರುದಾರರ ಶರ್ಟಿನ ಎಡಭಾಗದ ಜೇಬಿನಲ್ಲಿ 100/- ರೂ. ಮುಖಬೆಲೆಯ 2 ನೋಟುಗಳು ರೂ. 20/- ಮುಖಬೆಲೆಯ 2 ನೋಟುಗಳು ಹಾಗೂ ದೂರುದಾರರ ಮೊಬೈಲ್ ಫೋನ್ ಮತ್ತು ಈ ಕೇಸಿನ ಪ್ರಥಮ ವರ್ತಮಾನ ಪ್ರತಿ ಇರುತ್ತದೆ. ದೂರುದಾರರ ಶರ್ಟಿನ ಮುಂಭಾಗದ ಜೇಬಿನಲ್ಲಿದ್ದ ಹಣವನ್ನು ತೆಗೆದು ಪ್ಯಾಂಟಿನ ಎಡಭಾಗದ ಜೇಬಿನಲ್ಲಿ ಇರಿಸಲಾಗಿರುತ್ತದೆ. ಆ ವೇಳೆಯಲ್ಲಿ ಪಿನಾಪ್ತಲಿನ್ ಪೌಡರ್ ಸವರಿದ ನೋಟುಗಳನ್ನು ಪಂಚ 2 ರವರು ತನಿಖಾಧಿಕಾರಿಗಳ ಸೂಚನೆ ಮೇರೆಗೆ ತಮ್ಮ ಎರಡೂ ಕೈ ಬೆರಳುಗಳಿಂದ ಎಣಿಕೆ ಮಾಡಿ ನೋಡಿ ಮಡಚಿ ದೂರುದಾರರು ಧರಿಸಿದ್ದ ಶರ್ಟಿನ ಎಡಭಾಗದ ಜೇಬಿನಲ್ಲಿ ಇಟ್ಟಿರುತ್ತಾರೆ. ತನಿಖಾಧಿಕಾರಿಗಳು ದೂರುದಾರರಿಗೆ ಈ ಲಂಚದ ಹಣವನ್ನು ಎದುರುದಾರರು ಒತ್ತಾಯ ಪೂರ್ವಕವಾಗಿ ಕೇಳಿದರೆ ಮಾತ್ರ ತೆಗೆದುಕೊಡುವಂತೆಯೂ, ಅಲ್ಲಿಯವರೆಗೆ ಈ ಲಂಚದ ಹಣವನ್ನು ಮುಟ್ಟಬಾರದೆಂದು ತಿಳಿಸಿರುತ್ತಾರೆ. ತನಿಖಾಧಿಕಾರಿಗಳು ಪಿನಾಪ್ತಲಿನ್ ಪುಡಿ ಲೇಪಿತ ಕರೆನ್ಸಿ ನೋಟುಗಳನ್ನು ಎಣಿಕೆ ಮಾಡಿದ ಪಂಚ 2 ರವರ ಎರಡೂ ಕೈ ಬೆರಳುಗಳನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿಸಿ ತೊಳೆಸಲಾಗಿ, ದ್ರಾವಣವು

ಗುಲಾಬಿ ಬಣ್ಣಕ್ಕೆ ಬದಲಾವಣೆಯಾಗಿರುತ್ತದೆ. ನಂತರ ಎಲ್ಲರೂ ಕೈಗಳನ್ನು ಸೋಪು ಮತ್ತು ನೀರಿನಿಂದ ಚೆನ್ನಾಗಿ ತೊಳೆದುಕೊಂಡಿರುತ್ತಾರೆ. ದೂರುದಾರರು ಎದುರುದಾರರನ್ನು ಕಾಣಲು ಹೋದಾಗ ನೆರಳು ಸಾಕ್ಷಿಯಾದ ಪಂಚ 1 ರವರು ದೂರುದಾರರೊಂದಿಗೆ ಅವರ ಸಂಬಂಧಿಕರಂತೆ ಹೋಗಿ ಅಲ್ಲಿ ದೂರುದಾರರು ಹಾಗೂ ಎದುರುದಾರರ ನಡುವೆ ನಡೆಯುವ ಎಲ್ಲಾ ವಿದ್ಯಮಾನಗಳನ್ನು ಸೂಕ್ಷ್ಮವಾಗಿ ಗಮನಿಸಿ, ನೋಡಿ, ಕೇಳಿಸಿಕೊಂಡು ನಂತರ ಕೇಳಿದಾಗ ತಿಳಿಸಬೇಕೆಂದು ಮತ್ತು ದೂರುದಾರರಿಗೆ ಲಂಚದ ಹಣವನ್ನು ಎದುರುದಾರರು ಸ್ವೀಕರಿಸಿದ ಬಳಿಕ ಹೊರಬಂದು ತಮ್ಮ ಕೈಯಿಂದ ತಲೆಯನ್ನು ಸವರಿಕೊಳ್ಳುವ ಮೂಲಕ ಸಂಜ್ಞೆಯನ್ನು ನೀಡುವಂತೆ ತಿಳುವಳಿಕೆಯನ್ನು ನೀಡಿರುತ್ತಾರೆ ಹಾಗೂ ಎದುರುದಾರರನ್ನು ಕಾಣಲು ಹೋದಾಗ ಅವರೊಂದಿಗೆ ನಡೆಯುವ ಸಂಭಾಷಣೆಯನ್ನು ದೂರುದಾರರಿಗೆ ತಮ್ಮ ಬಳಿ ಇದ್ದ ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿಕೊಳ್ಳುವಂತೆ ತಿಳಿಸಿರುತ್ತಾರೆ. ಈ ಎಲ್ಲಾ ಘಟನಾವಳಿಗಳನ್ನು ವಿವಿಧ ಹಂತಗಳಲ್ಲಿ ಫೋಟೋಗಳನ್ನು ತೆಗೆಸಿ ದಿ: 29/12/2016 ರಂದು ಮಧ್ಯಾಹ್ನ 1-00 ಘಂಟೆಯಿಂದ 3-30 ಘಂಟೆಯವರೆಗೆ ಚಿಕ್ಕಮಗಳೂರು ಎಸಿಬಿ ಕಛೇರಿಯಲ್ಲಿ ಕಂಪ್ಯೂಟರ್ ಮೂಲಕ ಗಣಕೀಕರಣ ಮಾಡಿದ ಪಹಿಸಿಕೊಡುವ ಪಂಚನಾಮೆಯಲ್ಲಿ ದಾಖಲಿಸಿರುತ್ತಾರೆ.

5. ದಿನಾಂಕ 29/12/2016 ರಂದು ತನಿಖಾಧಿಕಾರಿಗಳು ಜಪ್ತಿ ಪೂರ್ವದ ಪಂಚನಾಮೆಯ ಎಲ್ಲ ಔಚಿತ್ಯಪೂರ್ವ ನಡವಳಿಕೆಗಳನ್ನು ನಡೆಸಿದ ನಂತರ ದೂರುದಾರರು ಪಂಚ ಸಾಕ್ಷಿಗಳು, ಸಿಬ್ಬಂಧಿಯವರೊಂದಿಗೆ ಇಲಾಖಾ ವಾಹನದಲ್ಲಿ ಹೊರಟು ಚಿಕ್ಕಮಗಳೂರು ನಗರದ ನಗರಸಭೆ ಕಛೇರಿಯ ಮುಂಭಾಗಕ್ಕೆ ಸಾಯಂಕಾಲ 4-10 ಘಂಟೆಗೆ ತಲುಪಿ ದೂರುದಾರರು ಹಾಗೂ ನೆರಳು ಸಾಕ್ಷಿಯಾದ ಶ್ರೀ ಬಿ. ರಮೇಶ್ ರವರನ್ನು ಇಲಾಖಾ ವಾಹನದಿಂದ ಕೆಳಗೆ ಇಳಿಸಿ ಅವರಿಗೆ ಪ್ರಾಯೋಗಿಕ ಪಂಚನಾಮೆಯ ಸಮಯದಲ್ಲಿ ನೀಡಿದ ಸೂಚನೆ ಹಾಗೂ ತಿಳುವಳಿಕೆಗಳನ್ನು ಮತ್ತೊಮ್ಮೆ ನೀಡಿ 1ನೇ ಎದುರುದಾರರನ್ನು ಭೇಟಿಯಾಗಲು

ಕಳುಹಿಸಿಕೊಟ್ಟಿರುತ್ತಾರೆ. ಅವರಿಬ್ಬರೂ ನಡೆದುಕೊಂಡು ಹೋದಾಗ ನೆರಳು ಸಾಕ್ಷಿದಾರರು 1ನೇ ಎದುರುದಾರರ ಛೇಂಬರಿನ ಮುಖ್ಯ ದ್ವಾರದ ಬಳಿ ನಿಂತುಕೊಂಡಿರುತ್ತಾರೆ. ಆಗ ದೂರುದಾರರು ಕಛೇರಿಯ ಒಳಭಾಗಕ್ಕೆ ಹೋಗಿ 1ನೇ ಎದುರುದಾರರ ಟೇಬಲ್ಲಿನ ಮುಂಭಾಗದಲ್ಲಿ ನಿಂತುಕೊಂಡು ದೂರುದಾರರು ತಮ್ಮ ಮನೆಯ ಖಾತೆ ಆಯಿತೆ ಎಂದು ಕೇಳಿದಾಗ 1ನೇ ಎದುರುದಾರರು ದೂರುದಾರರಿಗೆ "ನಿಮ್ಮ ಕೆಲಸ ಆಗಿದೆ ಫೈಲು ಮನೆಯಲ್ಲಿ ಇಟ್ಟಿದ್ದೇನೆ, ನಾಳೆ ಬೆಳಿಗ್ಗೆ ಬಂದು ತೆಗೆದುಕೊಂಡು ಹೋಗಿ" ಎಂದು ಹೇಳಿ "4,000/- ರೂ. ಬಾಕಿ ಇತ್ತಲ್ಲ, ಕೊಡಿ" ಎಂದು ಕೇಳಿರುತ್ತಾರೆ. ಆಗ ದೂರುದಾರರು ತಮ್ಮ ಜೇಬಿಗೆ ಕೈ ಹಾಕಿ 1ನೇ ಎದುರುದಾರರಿಗೆ ಕೊಡಲು ತಂದಿದ್ದ ಲಂಚದ ಹಣವನ್ನು ಕೊಡಲು ಮುಂದಾದಾಗ 1ನೇ ಎದುರುದಾರರು ಲಂಚದ ಹಣವನ್ನು ತಮ್ಮ ಅಟೆಂಡರ್ ಹರೀಶ ಎಂಬುವವರಿಗೆ ಕೊಡಲು ತಿಳಿಸಿದ ಮೇರೆಗೆ ಅವರು 1ನೇ ಎದುರುದಾರರ ಕೊಠಡಿಯಿಂದ ಹೊರಗೆ ಬಂದು ವರಾಂಡದಲ್ಲಿ ಮಾತನಾಡುತ್ತಾ ನಿಂತಿದ್ದವರನ್ನು ಹರೀಶ ಯಾರು ಎಂದು ಕೇಳಿದಾಗ ಓರ್ವ ವ್ಯಕ್ತಿ "ನಾನೇ ಹರೀಶ" ಎಂದು ಮುಂದೆ ಬಂದಾಗ ದೂರುದಾರರು 1ನೇ ಎದುರುದಾರರು ಹೇಳಿರುತ್ತಾರೆ ಎಂದು ಹೇಳಿ ತನ್ನಲ್ಲಿದ್ದ 4,000/- ರೂ. ಫಿನಾಪ್ತಲಿನ್ ಪೌಡರ್ ಲೇಪಿತ ಲಂಚದ ಹಣವನ್ನು ನೀಡಿದಾಗ 2ನೇ ಎದುರುದಾರರು ಸದರಿ ಲಂಚದ ಹಣವನ್ನು ಕೇಳಿ ಬಲಗೈಯಿಂದ ಪಡೆದುಕೊಂಡು ಪ್ಯಾಂಟಿನ ಜೇಬಿನಲ್ಲಿ ಇಟ್ಟುಕೊಂಡಿರುತ್ತಾರೆ. ನಂತರ ದೂರುದಾರರು ಕಛೇರಿಯ ಮುಖ್ಯ ದ್ವಾರದಿಂದ ಹೊರಗೆ ಬಂದು ತನಿಖಾಧಿಕಾರಿಗಳು ಅವರಿಗೆ ಪ್ರಾಯೋಗಿಕ ಪಂಚನಾಮೆ ಕಾಲಕ್ಕೆ ನೀಡಿದ ಸೂಚನೆಯಂತೆ ತಮ್ಮ ತಲೆಯನ್ನು ಕೈಯಿಂದ ಸವರಿಕೊಳ್ಳುವುದರ ಮೂಲಕ ನಿಗದಿತ ಸಿಗ್ನಲ್ ನೀಡಿರುತ್ತಾರೆ. ಆಗ ತನಿಖಾಧಿಕಾರಿಯವರು ಅಲ್ಲಿಗೆ ಬಂದು ನೆರಳು ಸಾಕ್ಷಿಯನ್ನು ಈ ಬಗ್ಗೆ ಕೇಳಿದಾಗ ಅವರು ಸದರಿ ಘಟನೆಯನ್ನು ಪ್ರತ್ಯಕ್ಷವಾಗಿ ನೋಡಿರುತ್ತೇನೆ ಎಂದು ನುಡಿದಿರುತ್ತಾರೆ. ಆಗ ತನಿಖಾಧಿಕಾರಿಗಳು ದೂರುದಾರರನ್ನು ಕೇಳಿದಾಗ ಅವರು 1ನೇ ಎದುರುದಾರರ ಸೂಚನೆಯ ಮೇರೆಗೆ ತಾನು 2ನೇ ಎದುರುದಾರರನ್ನು ಕೇಳಿದಾಗ ಅವರು ತನ್ನಿಂದ

ಒತ್ತಾಯಪೂರ್ವಕವಾಗಿ ಲಂಚದ ಹಣವನ್ನು ಪಡೆದುಕೊಂಡು ತಮ್ಮ ಜೇಬಿನಲ್ಲಿ ಇಟ್ಟುಕೊಂಡಿರುತ್ತಾರೆ ಎಂದು ತೋರಿಸಿದಾಗ ತನಿಖಾಧಿಕಾರಿಗಳು ಅವರನ್ನು ವಶಕ್ಕೆ ಪಡೆದುಕೊಂಡು ಅವರ ಬಲಗೈ ಮುಂಗೈಯನ್ನು ಹಾಗೂ ಎಡಗೈ ಮುಂಗೈಯನ್ನು ಸಿಬ್ಬಂದಿಯವರು ಹಿಡಿದುಕೊಂಡು 1ನೇ ಎದುರುದಾರರು ಕುಳಿತುಕೊಳ್ಳುವ ಛೇಂಬರಿಗೆ ಕರೆದುಕೊಂಡು ಬಂದಾಗ 1ನೇ ಎದುರುದಾರರು ಕೊಠಡಿಯಲ್ಲಿರದೆ ನಗರಸಭೆ ಅಧ್ಯಕ್ಷರ ಕೊಠಡಿಗೆ ತೆರಳಿದ್ದು ಆ ವೇಳೆಗೆ 1ನೇ ಎದುರುದಾರರ ಕೊಠಡಿಗೆ ಬಂದ ಸತೀಶ್ ಕುಮಾರ್ ಕಛೇರಿ ವ್ಯವಸ್ಥಾಪಕರಿಗೆ ಕಛೇರಿಗೆ ಬರುವಂತೆ ತಿಳಿಸಿದಾಗ ಅವರು ಕೊಠಡಿಯಿಂದ ಹೊರಗೆ ಹೋಗುವಷ್ಟರಲ್ಲಿ 1ನೇ ಎದುರುದಾರರು ತಮ್ಮ ಕೊಠಡಿಗೆ ಬಂದಿರುತ್ತಾರೆ. ಆಗ ತನಿಖಾಧಿಕಾರಿಗಳು ವಿಷಯ ತಿಳಿಸಿ 2ನೇ ಎದುರುದಾರರ ಬಲ ಮುಂಗೈಯನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿ ತೊಳೆದಾಗ ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ಬದಲಾವಣೆಯಾಗಿರುತ್ತದೆ. ಅದೇ ರೀತಿ ಎಡಗೈ ಬೆರಳುಗಳನ್ನು ಇನ್ನೊಂದು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿ ತೊಳೆದಾಗ ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ಬದಲಾವಣೆಯಾಗಿರುತ್ತದೆ. 2ನೇ ಎದುರುದಾರರಿಗೆ ಬದಲಿ ಪ್ಯಾಂಟಿನ ವ್ಯವಸ್ಥೆ ಮಾಡಿ ಅವರ ಪ್ಯಾಂಟನ್ನು ಬಿಚ್ಚಿಸಿಕೊಂಡು ಲಂಚದ ಹಣವನ್ನು ಇಟ್ಟುಕೊಂಡಿದ್ದ ಪ್ಯಾಂಟಿನ ಮುಂಭಾಗದ ಬಲ ಜೇಬನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿಸಿ ತೊಳೆದಾಗ ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ಬದಲಾವಣೆಯಾಗಿರುತ್ತದೆ. ನಂತರ ತನಿಖಾಧಿಕಾರಿಗಳು ವಹಿಸಿಕೊಡುವ ಪಂಚನಾಮೆ ಕಾಲಕ್ಕೆ ದೂರುದಾರರಿಗೆ 1ನೇ ಎದುರುದಾರರನ್ನು ಭೇಟಿ ಮಾಡಲು ಹೋದಾಗ ಅವರೊಂದಿಗೆ ನಡೆಯುವ ಸಂಭಾಷಣೆಯನ್ನು ಧ್ವನಿ ಮುದ್ರಿಸಿಕೊಳ್ಳಲು ನೀಡಿದ್ದ ಮೊಬೈಲ್‌ನ್ನು ದೂರುದಾರರು ಹಾಜರುಪಡಿಸಿದ್ದು ಆದರೆ ಚಿಕ್ಕಮಗಳೂರು ನಗರಸಭೆ ಕಛೇರಿ ಒಳಗೆ ಪ್ರವೇಶಿಸುವ ಕಾಲಕ್ಕೆ ಪ್ಯಾಂಟ್ ಜೇಬಿನಲ್ಲಿದ್ದ ಮೊಬೈಲ್ ಸ್ವಿಚ್ ಆಫ್ ಆಗಿದ್ದರಿಂದ ಯಾವುದೇ ಸಂಭಾಷಣೆ ರೆಕಾರ್ಡ್ ಆಗಿರುವುದಿಲ್ಲ.

6. ತನಿಖಾಧಿಕಾರಿಗಳು 2ನೇ ಎದುರುದಾರರಿಗೆ ಏನಾದರೂ ಬರೆದುಕೊಡುವುದಿದ್ದರೆ ಬರೆದುಕೊಡಿ ಎಂದು ಕೇಳಿದಾಗ "ಎರಡನೇ ಎದುರುದಾರರು ಬರೆಯಲು ಬರುವುದಿಲ್ಲ" ಎಂದು ಹೇಳಿ ಕಛೇರಿಯಲ್ಲಿದ್ದ ಶ್ರೀಮತಿ ಮೀನಾಕುಮಾರಿ ಟ್ಯಾಕ್ಸ್ ಕಲೆಕ್ಟರ್‌ರವರ ಮುಖಾಂತರ ಬರೆಸಿಕೊಟ್ಟಿದ್ದು ಅದರಲ್ಲಿ "ದಿ: 29/12/2016ರಂದು ನಾನು ಹೊರಗಡೆ ಆಯುಕ್ತರ ಕಛೇರಿಯ ಚೇರ್ ನಲ್ಲಿ ಕೂತಿದ್ದೆ. ನನಗೆ ಏನೂ ಗೊತ್ತಿಲ್ಲ, ಆಯುಕ್ತರು ಕೊಠಡಿಯೊಳಗೆ ಕರೆದರು. ಸಾರ್ವಜನಿಕರು ಇದ್ದರು. ಅವರು ಅದೇನು ನೋಡಿ ಅಂತ ಪುನಃ ಹೊರಗೆ ಕಳುಹಿಸಿದರು. ಸಾರ್ವಜನಿಕರು ಹೊರಗೆ ಬಂದು ಇಬ್ಬರಲ್ಲಿ ಒಬ್ಬರು ದುಡ್ಡು ಕೊಡಿ ಎಂದು ಹೇಳಿದರು ಇನ್ನೊಬ್ಬರು ದುಡ್ಡು ಕೊಟ್ಟರು. ಹಣ ತೆಗೆದು ಪ್ಯಾಂಟ್ ಜೇಬಿನಲ್ಲಿ ಇಟ್ಟುಕೊಂಡಿದ್ದೆ. ನನಗೆ ಇದರ ಬಗ್ಗೆ ಏನೂ ಗೊತ್ತಿಲ್ಲ" ಎಂದು ಬರೆದುಕೊಟ್ಟಿರುತ್ತಾರೆ. 2ನೇ ಎದುರುದಾರರ ಈ ಸಮಜಾಯಿಷಿಯನ್ನು ದೂರುದಾರರು ಒಪ್ಪಿರುವುದಿಲ್ಲ. ತನಿಖಾಧಿಕಾರಿಗಳು 1ನೇ ಎದುರುದಾರರಿಗೆ ಲಿಖಿತ ಸಮಜಾಯಿಷಿಯನ್ನು ನೀಡಲು ಕೇಳಿದಾಗ 1ನೇ ಎದುರುದಾರರು ತಮ್ಮ ಸಮಜಾಯಿಷಿಯಲ್ಲಿ "ದಿ: 20/12/2016 ರಂದು ಮಧ್ಯಾಹ್ನ 4-00 ಘಂಟೆಯಿಂದ ಅಧ್ಯಕ್ಷರ ಮೌಖಿಕ ಕರೆ ಮೇರೆಗೆ ಅಧ್ಯಕ್ಷರ ಕೊಠಡಿಯಲ್ಲಿ ಹಾಜರಿದ್ದು ಅಧಿಕಾರಿಗಳು ಹಾಗೂ ಸಿಬ್ಬಂಧಿಯವರ ಜೊತೆಯಲ್ಲಿ ಸಾರ್ವಜನಿಕರ ಕೆಲಸವನ್ನು ಮಾಡುತ್ತಿದ್ದೆ. ಎಸಿಬಿ ಪೊಲೀಸ್ ಅಧಿಕಾರಿಗಳು ಹರೀಶ ಈತನು ಸಾರ್ವಜನಿಕರಿಂದ ಹಣವನ್ನು ತೆಗೆದುಕೊಂಡ ಬಗ್ಗೆ ನನ್ನ ಗಮನಕ್ಕೆ ತಂದಿರುತ್ತಾರೆ. ಇದರ ಬಗ್ಗೆ ನಾನೇ ಕಡತವನ್ನು ಪರಿಶೀಲನೆ ಮಾಡಿರುತ್ತೇನೆ. ಹಣವನ್ನು ನಾನು ಪಡೆದುಕೊಂಡಿರುವುದಿಲ್ಲ. ನನ್ನ ಮಗಳ ಆರೋಗ್ಯ ಸರಿ ಇಲ್ಲದ ಕಾರಣ ನಾನು ಕಾರ್ಪೋರೇಶನ್ ಬ್ಯಾಂಕ್‌ನಿಂದ 24,000/- ರೂ.ಗಳನ್ನು ತೆಗೆದುಕೊಂಡು ಬರುವಂತೆ ಹರೀಶನಿಗೆ ಹೇಳಿದ್ದೆ. ಆ ಮೊತ್ತವು ಹರೀಶನ ಹತ್ತಿರ ಇರುತ್ತದೆ. ಆದರೆ ಇದರ ಬಗ್ಗೆ ತನಗೆ ಗೊತ್ತಿರುವುದಿಲ್ಲ" ಎಂದು ತಿಳಿಸಿದ್ದನ್ನು ದೂರುದಾರರು ಒಪ್ಪಿರುವುದಿಲ್ಲ. ಹಾಗಾಗಿ 1ನೇ ಎದುರುದಾರರ ಸಮಜಾಯಿಷಿಯನ್ನು ಒಪ್ಪಲು ಬರಲಾಗದು.

7. ದೂರುದಾರರು 1ನೇ ಎದುರುದಾರರ ಸೂಚನೆಯ ಮೇರೆಗೆ ತಾನು 2ನೇ ಎದುರುದಾರರನ್ನು ಕೇಳಿದಾಗ ಅವರು ತನ್ನಿಂದ ಒತ್ತಾಯಪೂರ್ವಕವಾಗಿ ಲಂಚದ ಹಣವನ್ನು ಪಡೆದುಕೊಂಡು ತನ್ನ ಜೇಬಿನಲ್ಲಿ ಇಟ್ಟುಕೊಂಡಿರುತ್ತಾರೆ ಸದರಿ ಹಣದ ಬಗ್ಗೆ ತನಿಖಾಧಿಕಾರಿಯು 2ನೇ ಎದುರುದಾರರನ್ನು ಹಾಗೂ 1ನೇ ಎದುರುದಾರರನ್ನು ವಿಚಾರಿಸಿದಾಗ ಸರಿಯಾದ, ತೃಪ್ತಿದಾಯಕವಾದ ಉತ್ತರ ಅಥವಾ ವಿವರಣೆ ಅಥವಾ ಲೆಕ್ಕ ನೀಡಿರುವುದಿಲ್ಲ. 1ನೇ ಎದುರುದಾರರು ತಾವು ಕುಳಿತ ಕುರ್ಚಿಯ ಮೇಲೆ ಸುಸ್ತಾಗಿ ಎದೆ ಹಿಡಿದುಕೊಂಡಾಗ ತನಿಖಾಧಿಕಾರಿಗಳು 1ನೇ ಎದುರುದಾರರನ್ನು ವೈದ್ಯಕೀಯ ನೆರವಿನ ಸಲುವಾಗಿ ಸರ್ಕಾರಿ ಆಸ್ಪತ್ರೆಗೆ ಕಳುಹಿಸಿಕೊಟ್ಟ ಕಾರಣ ದಸ್ತಗಿರಿ ಮಾಡಿರುವುದಿಲ್ಲ. 2ನೇ ಎದುರುದಾರರನ್ನು ದಸ್ತಗಿರಿ ಮಾಡಿ ತಮ್ಮ ವಶಕ್ಕೆ ತೆಗೆದುಕೊಂಡಿರುತ್ತಾರೆ.

8. ಸಾಕ್ಷಿದಾರರ ಹೇಳಿಕೆಗಳು, ದೂರು ಅರ್ಜಿ ಹಾಗೂ ತನಿಖಾಧಿಕಾರಿಗಳು ಸಂಗ್ರಹಿಸಿದ ದಾಖಲೆ ಮತ್ತು ಇತರೆ ಅಂಶಗಳು, 1 ಮತ್ತು 2ನೇ ಎದುರುದಾರರ ಸತತವಾದ ದುರ್ನಡತೆಯನ್ನು ತೋರಿಸುತ್ತದೆ.

9. ಧ್ವನಿ ವಿಶ್ಲೇಷಣಾ ವರದಿಯಲ್ಲಿ ಮುದ್ರಿತ ಧ್ವನಿಯು 1 ನೇ ಎದುರುದಾರರ ಧ್ವನಿಯೊಂದಿಗೆ ತಾಳೆಯಾಗಿರುವುದು ದೃಢಪಟ್ಟಿರುತ್ತದೆ ಹಾಗೂ ರಾಸಾಯನಿಕ ತಜ್ಞರ ಪರೀಕ್ಷಾ ವರದಿಯಲ್ಲಿ ತನಿಖಾಧಿಕಾರಿಗಳು ಸಂಗ್ರಹಿಸಿದ ಮುದ್ದೇ ಮಾಲುಗಳಲ್ಲಿ ಫಿನಾಪ್ತಲಿನ್ ಅಂಶ ಇರುವುದು ದೃಢಪಟ್ಟಿರುತ್ತದೆ.

10. ನಂತರ 1 ಮತ್ತು 2ನೇ ಎದುರಾರರಿಂದ ಸದರಿ ಆರೋಪಗಳಿಗೆ ಸಬಂಧಪಟ್ಟಂತೆ, ಪರಿವೀಕ್ಷಣಾ ಟಿಪ್ಪಣಿಯನ್ನು ಕಳುಹಿಸಿ ಅವರಿಂದ ಆಕ್ಷೇಪಣೆಗಳನ್ನು ಕೇಳಲಾಯಿತು 1ನೇ ಎದುರುದಾರರು ತಮ್ಮ ಸಮಜಾಯಿಷಿಯನ್ನು ದಿನಾಂಕ 29/09/2021 ರಂದು ಹಾಗೂ 2ನೇ ಎದುರುದಾರರು ದಿನಾಂಕ 30/09/2021 ರಂದು ಸಲ್ಲಿಸಿರುತ್ತಾರೆ. ಸದರಿ ಸಮಜಾಯಿಷಿಗಳನ್ನು ಪರಿಶೀಲಿಸಲಾಗಿ 1ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ "ದೂರುದಾರರು ಎಸಿಬಿ ಕಛೇರಿಗೆ ದೂರು ಕೊಡುವ ಹಾಗೂ ಟ್ರ್ಯಾಪ್ ಮಾಡಿದ್ದಾರೆ ಎನ್ನಲಾದ ದಿನಾಂಕಕ್ಕಿಂತ ಮೊದಲು ಖಾತಾ ಬದಲಾವಣೆಗೆ ದಿ: 09/12/2016 ರಂದು ಆಗಿರುವುದನ್ನು ಎಸಿಬಿ ಪೊಲೀಸರು ಯಾವುದೇ

ದಾಖಲೆಗಳನ್ನು ನಗರಸಭೆಯಿಂದ ಪಡೆದುಕೊಂಡಿರುವುದಿಲ್ಲ. ನನ್ನ ಬಳಿ ದೂರುದಾರರಿಗೆ ಸಂಬಂಧಿಸಿದ ಯಾವುದೇ ಕೆಲಸ ಬಾಕಿ ಇರುವುದಿಲ್ಲ. ನಾನು ದೂರುದಾರರಿಂದ ಲಂಚದ ಹಣವನ್ನು ಹರೀಶ ಎಂಬ ವ್ಯಕ್ತಿ ಮುಖಾಂತರ ಪಡೆದಿರುವುದಿಲ್ಲ" ಎಂದು ಹೇಳಿ ಆಪಾದನೆಗಳನ್ನು ನಿರಾಕರಿಸಿರುತ್ತಾರೆ. 2ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ "ನಾನು ದೂರುದಾರರಿಗೆ ಲಂಚಕ್ಕಾಗಿ ಬೇಡಿಕೆ ಇಟ್ಟಿರುವುದಿಲ್ಲ ಹಾಗೂ ಪಡೆದುಕೊಂಡಿರುವುದಿಲ್ಲ. ನನಗೆ ಖಾತಾ ಬದಲಾವಣೆ ಮಾಡುವ ಅಧಿಕಾರ ಇರುವುದಿಲ್ಲ. ಈ ಪ್ರಕರಣಕ್ಕೂ ನನಗೂ ಯಾವುದೇ ಸಂಬಂಧ ಇರುವುದಿಲ್ಲ" ಎಂದು ಆಪಾದನೆಗಳನ್ನು ಅಲ್ಲಗಳೆಯುವುದರ ಹೊರತಾಗಿ ಅದಕ್ಕೆ ಪೂರಕವಾದ ಯಾವುದೇ ಪೂರಕ ದಾಖಲಾತಿಗಳನ್ನು ಸಲ್ಲಿಸಿರುವುದಿಲ್ಲ. ಆದ್ದರಿಂದ 1 ಮತ್ತು 2ನೇ ಎದುರುದಾರರು ನೀಡಿರುವ ಸಮಜಾಯಿಷಿ ಅಂಶಗಳ ಮೇರೆಗೆ ಪ್ರಕರಣವನ್ನು ಮುಕ್ತಾಯಗೊಳಿಸಲು ಸೂಕ್ತ ಕಾರಣಗಳು ಕಂಡುಬರುವುದಿಲ್ಲ.

11. ಸಾಕ್ಷಿದಾರರ ಹೇಳಿಕೆಗಳು, ದೂರು ಅರ್ಜಿ, ತನಿಖಾಧಿಕಾರಿ ಸಂಗ್ರಹಿಸಿದ ದಾಖಲೆ, ಧ್ವನಿ ವಿಶ್ಲೇಷಣಾ ವರದಿ, ರಾಸಾಯನಿಕ ತಜ್ಞರ ಪರೀಕ್ಷಾ ವರದಿ ಮತ್ತು ತನಿಖಾಧಿಕಾರಿಗಳು ಸಂಗ್ರಹಿಸಿದ ಮುದ್ದೇ ಮಾಲುಗಳಲ್ಲಿ ಪಿನಾಪ್ತಲಿನ್ ಅಂಶ ಇವುಗಳನ್ನು ಪರಿಶೀಲಿಸಿದಾಗ ದೂರುದಾರರು ಚಿಕ್ಕಮಗಳೂರಿನ ಕಾಳಿದಾಸ ನಗರದಲ್ಲಿರುವ ನಾಗರಾಜುರವರ ಮನೆಯನ್ನು ಖರೀದಿ ಮಾಡಿಕೊಂಡಿದ್ದು, ಸದರಿ ಮನೆಯನ್ನು ದೂರುದಾರರು ತಮ್ಮ ಮಗಳ ಮದುವೆ ಖರ್ಚಿನ ನಿಮಿತ್ತ ನಿಂಗೇಗೌಡ ಎಂಬವರಿಗೆ ಮಾರಾಟ ಮಾಡಿದ್ದು, ಸದರಿ ಮನೆಯನ್ನು ನಾಗರಾಜು ರವರ ಹೆಸರಿನಿಂದ ದೂರುದಾರರ ಹೆಸರಿಗೆ ಖಾತೆ ಬದಲಾವಣೆ ಮಾಡಿಕೊಡಲು ದೂರುದಾರರು ನಗರಸಭೆ ಚಿಕ್ಕಮಗಳೂರು ಪೌರಾಯುಕ್ತರ ಕಛೇರಿಗೆ ದಿ: 28/09/2016 ರಂದು ಅರ್ಜಿ ನೀಡಿರುತ್ತಾರೆ. ಈ ಸಂಬಂಧ ದೂರುದಾರರು ನಿಂಗೇಗೌಡ ಹಾಗೂ ಮಂಜುನಾಥರವರೊಂದಿಗೆ ದಿ: 28/12/2016 ರಂದು ಹೋಗಿ ಕೇಳಿದಾಗ 1ನೇ ಎದುರುದಾರರು ಅಭಿವೃದ್ಧಿ ಶುಲ್ಕ 60,000/-- ರೂ. ಆಗುತ್ತದೆ.

ಅದರಲ್ಲಿ ಅರ್ಧ ಭಾಗದಷ್ಟು ತನಗೆ ಲಂಚದ ರೂಪದಲ್ಲಿ ಹಣ ನೀಡಿ ಎಂದು ಬೇಡಿಕೆ ಇಟ್ಟಿರುತ್ತಾರೆ. ಆಗ ದೂರುದಾರರು ಸ್ವಲ್ಪ ಕಡಿಮೆ ಮಾಡಿಕೊಳ್ಳಿ ಎಂದು ಕೇಳಿದಾಗ 20,000/-ರೂ. ನೀಡಬೇಕೆಂದು ಹೇಳಿರುತ್ತಾರೆ. ದೂರುದಾರರು ಅಷ್ಟು ಹಣ ಇಲ್ಲದ ಕಾರಣ ಅವರು ನಿಂಗೇಗೌಡ ಮತ್ತು ಮಂಜುರವರೊಂದಿಗೆ ಹೊರಗೆ ಬಂದು ನಿಂಗೇಗೌಡರ ಬಳಿ 20,000/- ರೂ. ಹಣ ಪಡೆದುಕೊಂಡು ದೂರುದಾರರಿಗೆ ತುರ್ತು ಅಗತ್ಯವಿದ್ದ ಕಾರಣ 4,000/- ರೂ. ಹಣವನ್ನು ಅದರಲ್ಲಿಂದ ಇಟ್ಟುಕೊಂಡು ಉಳಿದ 16,000/- ರೂ.ಗಳೊಂದಿಗೆ ದೂರುದಾರರು ಮತ್ತು ಮಂಜು ನಗರಸಭೆಗೆ ಬಂದು 1ನೇ ಎದುರುದಾರರಿಗೆ ಕೊಟ್ಟಿರುತ್ತಾರೆ. ಆಗ 1ನೇ ಎದುರುದಾರರು ಉಳಿದ 4,000/- ರೂ. ಲಂಚದ ಹಣವನ್ನು ಕೇಳಿದ್ದು ಆಗ ದೂರುದಾರರು ತಮ್ಮ ಬಳಿ ಈಗ ಇಲ್ಲ ಎಂದು ತಿಳಿಸಿದಾಗ 1ನೇ ಎದುರುದಾರರು ದೂರುದಾರರಿಗೆ "ಖಾತೆ ರೆಡಿ ಮಾಡಿ ಇಟ್ಟಿರುತ್ತೇನೆ ನಾಳೆ 4,000/- ರೂ. ಲಂಚದ ಹಣ ತೆಗೆದುಕೊಂಡು ಸಾಯಂಕಾಲ 4-00 ಘಂಟೆಗೆ ಕಛೇರಿಗೆ ಬಂದು ನೀಡು" ಎಂದು ತಿಳಿಸಿರುತ್ತಾರೆ. ಆ ಸಮಯದಲ್ಲಿ ದೂರುದಾರರು ತಮ್ಮಲ್ಲಿದ್ದ ಮೊಬೈಲ್‌ನಿಂದ ಸದರಿ ಸಂಭಾಷಣೆಯನ್ನು ರೆಕಾರ್ಡ್ ಮಾಡಿಕೊಂಡಿರುತ್ತಾರೆ. ದಿ: 29/12/2016 ರಂದು ಸಂಜೆ ಪೌರಾಯುಕ್ತರ ಕಛೇರಿಗೆ ನೆರಳು ಸಾಕ್ಷಿ ರಮೇಶ್ ರವರ ಜೊತೆ ಹೋಗಿ 1ನೇ ಎದುರುದಾರರನ್ನು ಭೇಟಿ ಮಾಡಿ ಖಾತೆ ಬದಲಾವಣೆ ಬಗ್ಗೆ ವಿಚಾರಿಸಿದಾಗ 1ನೇ ಎದುರುದಾರರು ಕೆಲಸ ಆಗಿದೆ ಎಂದು ತಿಳಿಸಿ ಉಳಿದ 4,000/- ರೂ.ಗಳನ್ನು ಕೇಳಿದಾಗ ದೂರುದಾರರು ಕೊಡಲು ಮುಂದಾದಾಗ 1ನೇ ಎದುರುದಾರರು ತಮ್ಮ ಕಛೇರಿಯ ಅಟೆಂಡರ್ ಹರೀಶರವರ ಕಡೆ ಕೊಡಿ ಎಂದು ಹೇಳಿ 2ನೇ ಎದುರುದಾರ್ ಹರೀಶರವರ ಮುಖಾಂತರ ಲಂಚದ ಹಣವನ್ನು ಪಡೆದುಕೊಂಡಿದ್ದು, ತಮ್ಮ ಕರ್ತವ್ಯದಲ್ಲಿ ನೀತಿ ನಿಷ್ಠೆಯನ್ನು ಪಾಲಿಸದೇ ಕರ್ತವ್ಯದಲ್ಲಿ ಶ್ರದ್ಧೆ ಹೊಂದಿರದೆ ಸರ್ಕಾರಿ ನೌಕರನಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು, ಭ್ರಷ್ಟಾಚಾರವೆಸಗಿ, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966ರ (ಪ್ರಸ್ತುತ ಕರ್ನಾಟಕ ನಾಗರಿಕ

ಸೇವಾ(ನಡತೆ) ನಿಯಮಗಳು 2021) ರ ನಿಯಮ 3 (1) (i) ರಿಂದ (iii) ನ್ನು ಉಲ್ಲಂಘಿಸಿ ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

12. ಈ ಮೇಲ್ಕಂಡ ಅಂಶಗಳಿಂದಾಗಿ ಎದುರುದಾರರಾದ 1) ಶ್ರೀ ಪಿ. ಶಿವಪ್ರಸಾದ ಬಿನ್ ಲೇಟ್ ಪುಟ್ಟರಾಜು ಟಿ. ಪೌರಾಯುಕ್ತರು, ನಗರಸಭೆ, ಚಿಕ್ಕಮಗಳೂರು ಜಿಲ್ಲೆ (2) ಶ್ರೀ ಹರೀಶ ಎ. ಬಿನ್ ಲೇಟ್ ಕೆಂಚಪ್ಪ, ಡಿ. ಗ್ರುಪ್ ಎಂಪ್ಲಾಯಿ, (ಅಟೆಂಡರ್) ನಗರಸಭೆ, ಚಿಕ್ಕಮಗಳೂರು ಜಿಲ್ಲೆ ಇವರುಗಳ ವಿರುದ್ಧ ಶಿಸ್ತು ನಡವಳಿಕೆ ಹೂಡಲು ಮತ್ತು ಇಲಾಖಾ ವಿಚಾರಣೆಯನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957 ರ ನಿಯಮ 14-ಎ ರ ಅಡಿಯಲ್ಲಿ ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12 (3) ರನ್ವಯ ಪ್ರದತ್ತವಾದ ಅಧಿಕಾರದಡಿ, ಸಕ್ಷಮ ಪ್ರಾಧಿಕಾರಕ್ಕೆ ಈ ಮೂಲಕ ಶಿಫಾರಸ್ಸು ಮಾಡಲಾಗಿದೆ.

13. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12 (4) ರ ಪ್ರಕಾರ, ಶಿಸ್ತು ಪ್ರಾಧಿಕಾರವು ಈ ವರದಿಯನ್ವಯ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿರುವ ಕ್ರಮದ ಬಗ್ಗೆ ಈ ವರದಿ ತಲುಪಿದ ದಿನಾಂಕದಿಂದ **ಮೂರು ತಿಂಗಳೊಳಗಾಗಿ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

14/12/21

(ನ್ಯಾಯಮೂರ್ತಿ ಬಿ.ಎಸ್. ಪಾಟೀಲ್)
ಉಪಲೋಕಾಯುಕ್ತರು
ಕರ್ನಾಟಕ ರಾಜ್ಯ, ಬೆಂಗಳೂರು.